# ಗದ್ಯದ ಮಧುರ ಬಂಧ

ಈಚಿನ ವರ್ಷಗಳಲ್ಲಿ ಕನ್ನಡದ ಹತ್ತಾರು ಲೇಖಕರು ಆಕರ್ಷಕವಾದ ಗದ್ಯ ಬರವಣಿಗೆಯನ್ನು ಮಾಡುತ್ತಿದ್ದಾರೆ. ಕನ್ನಡ ಭಾಷೆಯ ಮಿಂಚು ಅವರ ಕೃತಿಗಳಲ್ಲಿ ಅಲ್ಲಲ್ಲಿ ಚೆಲ್ಲಾಡಿರುತ್ತದೆ. ಕುತೂಹಲ ಹುಟ್ಟಿಸುವ ಈ ಗದ್ಯಕಾರರ ಕೃತಿಗಳನ್ನು 'ಚೆನ್ನಾಗಿದೆ' ಎಂದು ಓದುಗರು ಆಗಾಗ ಮೆಚ್ಚಿಕೊಳ್ಳುವುದುಂಟು. ಹಾಗಿದ್ದೂ, ಒಮ್ಮೆ ಓದಿದ ಬಳಿಕ ಅವರ ಕೃತಿಗಳನ್ನು ಮತ್ತೆ ತೆರೆಯುವ ಸಾಹಸವನ್ನು ಯಾರೂ ಮಾಡುವುದಿಲ್ಲ. ಅವುಗಳ ಮರುಓದು ಅಥವಾ ಮರುಭೇಟಿ ಪ್ರಯತ್ನಪಟ್ಟರೂ ಸಾಧ್ಯವಾಗದು. ಅದಕ್ಕೆ ಸಹಜ ಕಾರಣವಿದೆ. ಅವರು ಸೃಷ್ಟಿಸಿದ ಕೃತಿಗಳಲ್ಲಿ ಪಂಚೇಂದ್ರಿಯಗಳಿಗೆ ಲಗತ್ತಾದ ಬರವಣಿಗೆಯೇ ಇರುವುದಿಲ್ಲ.

ಕಾವ್ಯಕ್ಕೆ ಮಾತ್ರವಲ್ಲ, ಗದ್ಯಕ್ಕೂ ತನ್ನ ಭಾಷೆ, ಲಯ, ಛಂದಸ್ಸಿನಿಂದಲೇ ಸೆಳೆಯುವ ಸಮ್ಮೋಹಕ ಅಂಶವೊಂದು ಬೇಕಾಗುತ್ತದೆ. ಕನ್ನಡದಲ್ಲಿ ಅತ್ಯುತ್ತಮವಾದ ಗದ್ಯವನ್ನು ಸೃಷ್ಟಿಸಿದ ಹಲವಾರು ಲೇಖಕರಿದ್ದಾರೆ. ಈ ಲೇಖಕರ ಮುದಗೊಳಿಸುವ, ಬದುಕಿನ ಸ್ಪಂದನವನ್ನು ತೋರುವ, ಪಾರದರ್ಶಕ ಬರವಣಿಗೆಯನ್ನು ಯಾವ ಕಾಲಕ್ಕೂ, ಯಾವುದೇ ಮನಃಸ್ಥಿತಿಯಲ್ಲೂ ಓದಬಹುದು. ಉತ್ತಮ ಗದ್ಯವೆಂದರೆ ಪ್ರೇಮದ ತರಹ. ಅದಕ್ಕೆ ಮತ್ತೆಮತ್ತೆ ಆಹ್ವಾನಿಸುವ ಪ್ರೇಮಿಯ ಗುಣವಿರುತ್ತದೆ. ಅಲ್ಲಿ ಓದುಗ ಮತ್ತು ಲೇಖಕರ ನಡುವೆ ಕೊನೆಯಿಲ್ಲದ, ಕಾಲದ ಹಂಗಿಲ್ಲದ, ನಿರ್ವ್ಯಾಜ ಪ್ರೀತಿ ಚಾಲ್ತಿಯಲ್ಲಿರುತ್ತದೆ. ಈ ಮಧುರ ಬಂಧ ನಮ್ಮನ್ನು ಬಹುದೂರಕ್ಕೆ ಕರೆದೊಯ್ಯಬಲ್ಲದು.


ಕಲೆ: ಅದಿತ್ಯೆ ಸದಾಶಿವ್

ಓದುಗರು ಮರುಭೇಟಿ ಮಾಡಬಹುದಾದ ಲೇಖಕರು ಈಗೀಗ ಕಡಿಮೆಯಾಗುತ್ತಿದ್ದಾರೆ. ಯಾವುದೇ ಭಾಷೆಯಲ್ಲಿ ಗದ್ಯ ಬರಹಗಳೇ ಹೆಚ್ಚಿನ ಸಂಖ್ಯೆಯಲ್ಲಿ ಓದುಗರನ್ನು ಹಿಡಿದಿಟ್ಟುಕೊಂಡಿರುತ್ತವೆ. ತಮಗೆ ಪ್ರಿಯವಾದ ಲೇಖಕರ ಬರಹಗಳಿಗೆ ಕಾದು ಓದುವವರು ಎಲ್ಲ ಭಾಷೆಗಳಲ್ಲೂ ಇರುತ್ತಾರೆ. ತಲೆಮಾರುಗಳ ಓದಿನ ಅಭಿರುಚಿ, ಬದುಕಿನ ಕುರಿತ ರುಚಿಯನ್ನು ಬೆಳೆಸಿದ್ದರಲ್ಲಿ ಹೆಚ್ಚಿನ ಪಾಲು ಗದ್ಯ ಬರಹಗಳದೇ ಆಗಿದೆ. ನಮ್ಮ ಬೇಸರದ ಗಳಿಗೆಗಳಲ್ಲಿ ಕೈಯಲ್ಲಿ ಹಿಡಿದು ಕೂರುವುದು ಕೂಡ ಹೊಸ ಲೋಕವನ್ನು ಸೃಷ್ಟಿಸುವ, ಮಾಂತ್ರಿಕಗುಣವಿರುವ ಗದ್ಯಕಾರರನ್ನೇ. ಈ ಕಾಲದಲ್ಲಿ ತಮ್ಮ ಗದ್ಯ ಬರಹಗಳಿಂದಲೇ ಕನ್ನಡಿಗರನ್ನು ಕಟ್ಟಿಹಾಕುವ ಅವಕಾಶವೊಂದು ಯುವ ತಲೆಮಾರಿಗಿದೆ. ಆ ದಿಸೆಯಲ್ಲಿ ಹೊಸ ಲೇಖಕರು ಪ್ರಯತ್ನಿಸಿದಂತಿಲ್ಲ. ಅದು ಸವಾಲಿನ, ಕಠಿಣ ದಾರಿಯ ಉದ್ಯಮವಾದ್ದರಿಂದ ಅವರು ಮುಂದುವರಿಯಲು, ಪ್ರಯೋಗಗಳನ್ನು ಮಾಡಲು ಹಿಂಜರಿಯುತ್ತಿರಬಹುದು. ಮನಮುಟ್ಟುವಂತೆ ಬರೆಯುವ ಹೊಸ ಗದ್ಯ ಲೇಖಕರಿಂದ ಕನ್ನಡ ಸಾಹಿತ್ಯದ ವರ್ತಮಾನದ ಚಿತ್ರಣ ಬದಲಾಗಬಹುದು. ವಿಶಿಷ್ಟ ನುಡಿಗಟ್ಟಿನ ಗದ್ಯವು ಕನ್ನಡದಲ್ಲಿ ಓದುಗರನ್ನು ಉಳಿಸಬಲ್ಲದು, ನಮ್ಮಲ್ಲಿ ಹೊಸ ಚೈತನ್ಯವನ್ನು ತುಂಬಬಲ್ಲದು.

ಸನ್ನಿವೇಶ ಕೊಂಚ ಗಂಭೀರವಾಗಿದೆ, ನಿಜ. ಹಾಗೆಂದು ನಾವು ನಿರಾಶರಾಗಬೇಕಿಲ್ಲ. ತನ್ನ ಚಲನೆಯ ದಿಕ್ಕನ್ನು ನಿರ್ಧರಿಸುವ, ನಿರ್ದೇಶಿಸುವ ಶಕ್ತಿ ಸಾವಿರಾರು ವರ್ಷಗಳಿಂದ ಉಳಿದು ಬಂದಿರುವ ಕನ್ನಡಕ್ಕಿದೆ. ಹಾಗಾಗಿ, ನಾವೆಲ್ಲ ಸಂಭ್ರಮಿಸಬಹುದಾದ, ಹೆಮ್ಮೆಪಡಬಹುದಾದ ಪವಾಡ ಮುಂದೆ ನಡೆಯಬಹುದು. ಅದಕ್ಕೆ ಕಾಯಬೇಕಷ್ಟೆ.

**ಸಂದೀಪ ನಾಯಕ**